ಓಎಸ್ ಃ 421/2014
ಪಿ.ಡಬ್ಲ್ಯೂಃ 01

ದಿನಾಂಕಃ 01-09-2016 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ- ಶ್ರೀ ಎ.ಕೆ.ಹೆಚ್. ವಕೀಲರಿಂದ ಪ್ರತಿವಾದಿ 1, 2, 6 ಮತ್ತು 8 ರ ಪರವಾಗಿ ಃ-

ನಿಮ್ಮ ತಂದೆಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 4 ಗಂಡು ಮತ್ತು 3 ಜನ ಹೆಣ್ಣು ಮಕ್ಕಳು ಅವರುಗಳೆಂದರೆ ನಾರಾಯಣಪ್ಪ, ಗೋವಿಂದಪ್ಪ, ಮಾರೇಗೌಡ, ಬಸಪ್ಪ, ಜಯಮ್ಮ, ರಂಗಮ್ಮ ಮತುತ ಶಾರದಮ್ಮ ಎನ್ನುತ್ತಾರೆ. ಈ ಮೇಲಿನವರಲ್ಲಿ ಗೋವಿಂದಪ್ಪನವರು ಮಾತ್ರ ಮರಣ ಹೊಂದಿರುತ್ತಾರೆ. ಸಾಕ್ಷಿಗೆ ಈ ದಾವವನ್ನು ಯಾವ ಪರಿಹಾರ ಕೋರಿ ಸಲ್ಲಿಸಿರುತ್ತಾರೆಂದರೆ, ಭಾಗಾಂಶ ಕೋರಿ ಎನ್ನುತ್ತಾರೆ. ಸಾಕ್ಷಿಗೆ ನೀವು ಎಲ್ಲಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೀರಾ ಎಂದರೆ ನಾನು ಅವಿದ್ಯಾವಂತೆ ಎನ್ನುತ್ತಾರೆ. ನನಗೆ ಸುಮಾರು 50 ವರ್ಷಗಳಾಗಿವೆ ಎನ್ನುತ್ತಾರೆ, ನಿಮಗೆ 50 ವರ್ಷ ಎಂದು ತಿಳಿಸಲು ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂದರೆ ಹೌದು ಎನ್ನುತ್ತಾರೆ.

2. ನಿಮ್ಮ ತಂದೆ ಮರಣ ಹೊಂದಿ ಎಷ್ಟು ವರ್ಷಗಳಾಗಿವೆಂದರೆ ಸಾಕ್ಷಿಯು ಸುಮಾರು 15 ವರ್ಷಗಳಾದೆ, ಆದರೆ ದಿನಾಂಕ ಮತ್ತು ವರ್ಷ ನೆನಪಿರುವುದಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಎಷ್ಟು ಐಟಂ ಸ್ವತ್ತುಗಳಿಗೆ ದಾವ ಸಲ್ಲಿಸಿರುತ್ತೀರಾ ಎಂದರೆ 7 ಐಟಂಗಳಿಗೆ ಎನ್ನುತ್ತಾರೆ. ಸಾಕ್ಷಿಗೆ ನೀವು ಮದುವೆಯಾದ ನಂತರ ಒಟ್ಟು ಕುಟುಂಬದಲ್ಲಿ ಮುಂದುವರೆದಿರುವುದಿಲ್ಲ ಎಂದರೆ ಸರಿಯಲ್ಲ, ನಿಮ್ಮ ತಮ್ಮ

ಬಸಪ್ಪನೇ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ದಾವ ಸ್ವತ್ತುಗಳ ಚಕ್ಕುಬಂದಿಯನ್ನು ಹೇಳುವಂತೆ ಕೇಳಿದಾಗ ಸಾಕ್ಷಿಯು ಸರ್ವೆ ನಂಬರ್ 137/1 ರ ಪೂರ್ವಕ್ಕೆ-ಶ್ರೀನಿವಾಸ್, ಪಶ್ಚಿಮಕ್ಕೆ-ಕಂಬೇಗೌಡ, ಉತ್ತರಕ್ಕೆ-ರಸ್ತೆ, ದಕ್ಷಿಣಕ್ಕೆ-ಗಂಗಹನುಮಯ್ಯ ಎನ್ನುತ್ತಾರೆ. ಸಾಕ್ಷಿಗೆ ದಾವ ಸ್ವತ್ತಿನ ಚಕ್ಕುಬಂದಿ ಗೊತ್ತಿಲ್ಲದಿದ್ದರೂ ಸಹ ಗೊತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

3. ದಾವ ಆಸ್ತಿಗಳಲ್ಲಿ ಕೆಲವು ಆಸ್ತಿಗಳು ನಿಮ್ಮ ಅಣ್ಣ ತಮ್ಮಂದಿರಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರಿಕೆಯನ್ನು ಮಾಡಲು ಯಾರು ಮಾಹಿತಿ ನೀಡಿರುತ್ತಾರೆಂದರೆ ಸಾಕ್ಷಿಯು ನಾನೇ ಎನ್ನುತ್ತಾರೆ. ನಿಮ್ಮ ತಂದೆ 2001 ರಲ್ಲಿ ಮರಣ ಹೊಂದಿರುವುದರಿಂದ ನಿಮಗೆ ದಾವ ಆಸ್ತಿಯಲ್ಲಿ ಯಾವ ಭಾಗ ಬರಬೇಕಾಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

<u>ಪಾಟೀ ಸವಾಲು ಃ- ಶ್ರೀ ಕೆ.ಎಸ್.ಪಿ. ವಕೀಲರಿಂದ ಪ್ರತಿವಾದಿ 5 ರ ಪರವಾಗಿ ಃ-</u>

ಬಸಪ್ಪನವರು ನಿಮ್ಮ ತಾತ ಎಂದರೆ ಸರಿ, ಅವರಿಗೆ ಎಷ್ಟು ಜನ ಮಕ್ಕಳು ಎಂದರೆ 3 ಜನ ಗಂಡು ಮಕ್ಕಳು ಹಾಗೂ 1 ಹೆಣ್ಣು ಎನ್ನುತ್ತಾರೆ, ಅವರುಗಳೆಂದರೆ ನರಸಯ್ಯ, ಚಲುವಯ್ಯ, ಕಂಬೇಗೌಡ ಹಾಗೂ ಚನ್ನಮ್ಮ ಎನ್ನುತ್ತಾರೆ, ಈ ಮೇಲೆ ಹೇಳಿದ ಎಲ್ಲರೂ ಹಾಲಿ ಮರಣ ಹೊಂದಿರುತ್ತಾರೆ ಎನ್ನುತ್ತಾರೆ, ಇವರುಗಳೆಲ್ಲರೂ ಈಗಾಗಲೇ ವಿಭಾಗವಾಗಿರುತ್ತಾರೆ ಎನ್ನುತ್ತಾರೆ. ಆ ವಿಭಾಗಪತ್ರವನ್ನು

ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ವಿಭಾಗಪತ್ರವನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ವಕೀಲರ ಮೂಲಕ ಓದಿಸಿ ತಿಳಿದುಕೊಂಡಿರುತ್ತೇನೆ ಎನ್ನುತ್ತಾರೆ. ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

2. ನೀವು ಹಾಜರು ಪಡಿಸಿರುವ ಎಲ್ಲಾ ದಾಖಲಾತಿಗಳು ನಿಮ್ಮ ತಂದೆಯ ಹೆಸರಿನಲ್ಲಿದೆಯಾ ಎಂದರೆ ಹೌದು ಎನ್ನುತ್ತಾರೆ. ನಿಪಿ-1 ರ ಆಸ್ತಿಯಲ್ಲಿ ನೀವು 33 ಗುಂಟೆ ಭಾಗ ಕೇಳಿದ್ದು, ನಿಪಿ-1 ಆಸ್ತಿಯು ಇನ್ನೂ ಒಟ್ಟು ಕುಟುಂಬದ ಹೆಸರಿನಲ್ಲಿದೆಂದರೆ ಸಾಕ್ಷಿಯು ಒಟ್ಟು ಕುಟುಂಬದಲ್ಲಿಯೇ ಆಸ್ತಿಯಿದ್ದು, ಅದರ ಭಾಗಾಂಶ ಕೋರಿ ದಾವ ಸಲ್ಲಿಸಿರುತ್ತೇನೆ ಎನ್ನುತ್ತಾರೆ. ಕಂಬೇಗೌಡ ಹಾಗೂ ನರಸಯ್ಯ ಮಕ್ಕಳನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ನಿಪಿ-2 ಒಟ್ಟು ಕುಟುಂಬದ ಹೆಸರಿನಲ್ಲಿದೆಂದರೆ ಸಾಕ್ಷಿಯು ನನ್ನ ತಂದೆಯಾ ಹೆಸರಿನಲ್ಲಿದೆ ಎನ್ನುತ್ತಾರೆ. ನಿಪಿ-2 ರಲ್ಲಿ ಒಟ್ಟು 12 ಎಕರೆ 11 ಗುಂಟೆ ವಿಸ್ತೀರ್ಣವಿದ್ದು, ನೀವು 3 ಎಕರೆ 4 ಗುಂಟೆಗೆ ದಾವ ಹಾಕಿರುತ್ತೀರಾ ಎಂದರೆ ಅದು ನನ್ನ ತಂದೆಗೆ ಬಂದ ಭಾಗವಾಗಿರುತ್ತದೆ ಎನ್ನುತ್ತಾರೆ. ನಿಮ್ಮ ತಂದೆಯಾ ಹೆಸರಿನಲ್ಲಿರುವ 3 ಎಕರೆ 4 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-3 ಸಹ ಒಟ್ಟು ಕುಟುಂಬದ ಪಿತ್ರಾರ್ಜಿತ ಹೆಸರಿನಲ್ಲಿದೆಂದರೆ ಸರಿ.

3. ನಿಪಿ-5 ಯಾರ ಹೆಸರಿನಲ್ಲಿದೆಂದರೆ ನನ್ನ ತಂದೆಯಾ ಹೆಸರಿನಲ್ಲಿದೆ ಎನ್ನುತ್ತಾರೆ. ನಿಮ್ಮ ತಂದೆಯಾ ಹೆಸರಿನಲ್ಲಿಲ್ಲ ಎಂದರೆ ಅದು ಒಟ್ಟು ಕುಟುಂಬದ ಹೆಸರಿನಲ್ಲಿದೆ ಇನ್ನೂ ಭಾಗವಾಗಿಲ್ಲ ಎನ್ನುತ್ತಾರೆ. ನಿಪಿ-6 ರಲ್ಲಿ ಒಟ್ಟು 29 ಗುಂಟೆ

ವಿಸ್ತೀರ್ಣವಿದ್ದು, ನೀವು 15 ಗುಂಟೆಗೆ ದಾವ ಹಾಕಿರುತ್ತೀರಾ ಎಂದರೆ ಅದು ನನ್ನ ತಂದೆಗೆ ಬಂದ ಭಾಗವಾಗಿರುತ್ತದೆ ಎನ್ನುತ್ತಾರೆ, ಈ ಬಗ್ಗೆ ಯಾವುದೇ ದಾಖಲಾತಿ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ನಿಮ್ಮ ಅಣ್ಣ ಎಂದರೆ ಸರಿ, ಅವರು ಸರ್ಕಾರಿ ನೌಕರಿಯಲ್ಲಿರುತ್ತಾರೆ ಎನ್ನುತ್ತಾರೆ, ಅವರು ಪ್ರತ್ಯೇಕವಾಗಿ ಬೇರೆ ಕಡೆ ವಾಸಿಸುತ್ತಿದ್ದಾರೆಂದರೆ ಸರಿ.

ಪ್ರತಿವಾದಿ-5 ರ ಪರವಾಗಿ ಶ್ರೀ. ಕೆಎಸ್‌ಪಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸ. ಇ. ಎಂದು ಒಪ್ಪಿರುತ್ತಾರೆ,

2ನೇ ಅ.ಸಿ.ಜ. ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.